ಇ) ಈ ನಿವೇಶನಗಳನ್ನು ಯಾರಿಗೂ ಹಂಚಿರುವುದಿಲ್ಲ.

ಗೃಹ ಮಂಡಳಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾವಲುಗಾರರನ್ನು ನೇಮಿಸಿಕೊಂಡಿರುವುದು

3005 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯಲ್ಲಿ ಕಾವಲುಗಾರರು ಇದ್ದರೂ ಸಹ ಖಾಸಗಿ ಸೆಕ್ಯೂರಿಟಿ ಏಜನ್ಸಿಗಳಿಂದ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವುದು ನಿಜವೇ? ವಿವರ ನೀಡುವುದು?

ಆ) ಯಾವ್ಯಾವ ಸಂಸ್ಥೆಗಳಿಂದ ಎಷ್ಟು ಜನ ಸೆಕ್ಯೂರಿಟಿ ಗಾರ್ಡ್‌ಗಳನ್ನು ಎಷ್ಟು ವೆಚ್ಚದಲ್ಲಿ ನೇಮಿಸಿಕೊಳ್ಳಲಾಗಿದೆ?

ಇ) ಈ ಏಜೆನ್ಸಿಗಳು ಕೇವಲ ಕೈಬೆರಳೆಣಿಕೆಯಷ್ಟು? ಕಾವಲುಗಾರರನ್ನು ನೇಮಿಸಿ ಹೆಚ್ಚು ಕಾವಲುಗಾರರ ಲೆಕ್ಕ ತೋರಿಸಿ ಮಂಡಳಿಯಿಂದ ಹೆಚ್ಚು ಹಣ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯ ಕಾವಲುಗಾರರ ಸೇವೆಯನ್ನು ಮಂಡಳಿ ಕಛೇರಿ ಕಾವಲು ಕಾಯುವ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಕರ್ನಾಟಕ ಗೃಹ ಮಂಡಳಿಗೆ ಸಂಬಂಧಿಸಿದ ಕಾಲೋನಿ, ಮನೆಗಳು ಮತ್ತು ಮಹಡಿ ಮನೆಗಳನ್ನು ಕಾವಲು ಕಾಯುವ ಸಲುವಾಗಿ ಸೆಕ್ಯೂರಿಟಿ ಏಜೆನ್ಸಿಗಳನ್ನು ಗುತ್ತಿಗೆ ಆಧಾರದ ಮೇಲೆ ಮಂಡಳಿಯು ನೇಮಿಸಲಾಗಿದೆ.

ಆ) ರಾಜ್ಯಾದ್ಯಂತ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಕ ಮಾಡಿರುವ ಪಟ್ಟಿ, ಸೆಕ್ಯೂರಿಟಿ ಸಂಸ್ಥೆಯ ಹೆಸರು ಮತ್ತು ಇದಕ್ಕೆ ತಗುಲಿದ ವೆಚ್ಚ, ಇವುಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.

ANNEXURE

DETAILS OF SECURITY SERVICES AT KEB IN KARNATAKA STATE

Sl. No.	Name of Co-ordinating Office	Name of Security Agency	Security Personals	Expenditure incurred per month
1.	Yelahanka	M/s. Black Panther Security & shadowing	92	Rs. 1,33,000/month
2.	National Games.	M/s. B.G. Shirke & Company	14	Rs. 90,000/month
		M/s. Nagarjuna Construction Company Ltd.,	16	
		M/s. Ragunath Guptha	4	
		M/s. Lion's Security	10	
3.	3/4 Hootagalli	M/s. Asian Security M/s. V.N. Securities M/s. Mohanraj Security Agent M/s. V. Nagaraj M/s. K.K. Construction	111	Rs. 1,40,000/month
4.	Mysore	M/s. V.N. Securities	12	
		M/s. V.N. Securities	8	Rs. 49,000/month
		M/s. K.K. Construction	11	
5.	Bangalore	M/s. Elite Detective Private Ltd.,	3	
		M/s. Detect Well Securities	4	
		M/s. Detect Well Securities	3	Rs.34,800/month
		M/s. Asian Security	4	
		M/s. Tiger Security	7	
		M/s. Detect Well Securities	3	
6.	Kongeri	M/s.Tiger Security	19	Rs.23,300/month

Sl.	Name of Co-ordinating Office	Name of Security Agency	Security Personals	Expenditure incurred per month
7.	Bijapur	M/s. Pavan detectives	22	Rs. 42,090/month
8.	Gulbarga	M/s. Vinayaka Security Guard	7	Rs. 26,610/month
9.	Hubli	M/s. Asian Seccurity Detective Gureau	19	Rs. 50,000/month
		Total :	**369**	**Rs.5,88,800/month**

ದೊಡ್ಡ ಮೊತ್ತದ ಛಾಪ ಕಾಗದ ಬಳಕೆಯನ್ನೇ ನಿಲ್ಲಿಸಲು ಸರ್ಕಾರ ಯೋಚಿಸಿರುವ ಬಗ್ಗೆ

3007 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ದೊಡ್ಡ ಮೊತ್ತದ ಛಾಪಾ ಕಾಗದಗಳ ಬಳಕೆಯನ್ನು ನಿಲ್ಲಿಸಲು ಸರ್ಕಾರ ಯೋಚಿಸುತ್ತಿದೆಯೆ ? ಹಾಗಿದ್ದಲ್ಲಿ ಕಾರಣವೇನು ?

ಆ) ನಕಲಿ ಛಾಪಾ ಕಾಗದಗಳ ಹಾವಳಿ ಹೆಚ್ಚಿರುವ ಹಿನ್ನೆಲೆಯಲ್ಲಿ ಬಳಕೆದಾರರು ಸುಲಲಿತವಾಗಿ ಸ್ಟಾಂಪ್ ಡ್ಯೂಟಿ ಪಾವತಿಸಲು ಅನುಕೂಲವಾಗುವಂತೆ ಯಾವ ಪದ್ಧತಿಯನ್ನು ಅನುಸರಿಸಲಾಗುವುದು ? ಇದರ ಸಾಧಕ-ಬಾಧಕಗಳ ವಿವರ ನೀಡುವುದು ?

ಇ) ನಕಲಿ ಛಾಪಾ ಕಾಗದಗಳ ಹಾವಳಿಗೆ ಸಂಬಂಧಪಟ್ಟಂತೆ ಒಟ್ಟು ಎಷ್ಟು ಜನರನ್ನು ಬಂಧಿಸಲಾಗಿದೆ ? ಜಿಲ್ಲಾವಾರು ವಿವರ ನೀಡುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಕಲಿ ಛಾಪಾ ಕಾಗದಗಳ ಹಾವಳಿಗಳನ್ನು ತಡೆಗಟ್ಟಲು, ಮತ್ತು ದೊಡ್ಡ ಮೊತ್ತದ ಛಾಪಾ ಕಾಗದಗಳ ಬಳಕೆಯನ್ನು ನಿಯಂತ್ರಿಸಲು ಕರ್ನಾಟಕ ಸ್ಟಾಂಪು ತಿದ್ದುಪಡಿ ಕಾಯಿದೆ 10-ಎ ರಂತೆ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್, ಬ್ಯಾಂಕರ್ಸ್ ಚೆಕ್, ಪೇ ಆರ್ಡರ್ ಮೂಲಕ ಸಾರ್ವಜನಿಕರು ಪಾವತಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ಆ) ರಾಜ್ಯದಲ್ಲಿರುವ ಪ್ರತಿಯೊಂದು ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿಯೇ ಛಾಪಾ ಕಾಗದಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಜಾರಿ ಮಾಡಲು ಯೋಚಿಸಲಾಗುತ್ತಿದೆ. ಹಾಲಿ ಜಾರಿಯಲ್ಲಿರುವ ಮುದ್ರಾಂಕ ಶುಲ್ಕವನ್ನು ಡಿ.ಡಿ./ಪೇ ಆರ್ಡರ್ ಮೂಲಕ ಪಾವತಿ ಮಾಡುವ ಪದ್ಧತಿಯನ್ನು ಚುರುಕುಗೊಳಿಸಲಾಗುವುದು ಹಾಗೂ ಫ್ರಾಂಕಿಂಗ್ ಯಂತ್ರಗಳನ್ನು ಬಳಕೆಗಾಗಿ ಫ್ರಾಂಕಿಂಗ್ ನಿಯಮಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.